Grant of land to the Milk Producers' Co-operative Society of Harohalli, Kanakapura Taluk.

*Q**.—607. Sri S. KARIAPPA (Kanakapura).—

Will the Government be pleased to state:—

(*a*) Whether the Milk Producers' Co-operative Society, Harohally, Kanakapura Taluk, has applied for grant of land in Gullahatti forests;

(*b*) if so, the extent prayed for;

(*c*) Whether it is the policy of Government to grant lands to Milk Producers' Co-operative Societies?

A.—Sri KONDAJJI BASAPPA (Deputy Minister for Co-operation).—

(*a*) The Milk Producers' Co-operative Society, Harohally, has applied for land grant in Gullahatti Kaval, Harohally Hobli.

(*b*) Forty acres.

(*c*) Government have not laid down any policy in this behalt.

ಶ್ರೀ ಎಸ್. ಕರಿಯಪ್ಪ.—ಹಾರೋಹಳ್ಳಿಯಲ್ಲಿರುವ ಮಿಲ್ಕ್ ಪ್ರೊಡ್ಯೂಸರ್ಸ್ ಕೋಆಪರೇಟೀವ್ ಸೊಸೈಟಿ ಅವರು 40 ಎಕರೆಯಷ್ಟು ಭೂಮಿಯನ್ನು ಕೇಳಿದ್ದಾರೆ ಎಂದು ಉತ್ತರ ಹೇಳಿದ್ದೀರಿ. ಈ 40 ಎಕರೆ ಭೂಮಿಯನ್ನು ಯಾವ ಉದ್ದೇಶಕ್ಕಾಗಿ ಕೇಳಿದ್ದಾರೆ?

ಶ್ರೀ ಕೊಂಡಜ್ಜಿ ಬಸಪ್ಪ.—ಅವರಿಗೆ ಭೂಮಿ ಕೊಟ್ಟಿಲ್ಲ. ಯಾವುದಾದರೂ ಸ್ಕೀಂ ಇದ್ದರೆ ಕೊಡಿ ಎಂದು ಕೇಳಿದವು. ಅವರು ಯಾವ ಸ್ಕೀಂ ಕೊಡಲಿಲ್ಲ. ಆದುದರಿಂದ ಇಲಾಖೆಯವರು ಭೂಮಿ ಕೊಡುವುದಕ್ಕೆ ಶಿಫಾರಸ್ಸು ಮಾಡಲಿಲ್ಲ.

ಶ್ರೀ ಎಸ್. ಕರಿಯಪ್ಪ.—ಈ ಕೋಆಪರೇಟೀವ್ ಸೊಸೈಟಿಯ ಅಧ್ಯಕ್ಷರು ಯಾರು?

Mr. SPEAKER.—Why does he want to know the name?

ಶ್ರೀ ಎಸ್. ಕರಿಯಪ್ಪ.—ಈ ಸೊಸೈಟಿಯ ಅಧ್ಯಕ್ಷರಾಗಿರತಕ್ಕಂತವರು ಸೆಂಟ್ರಲ್ ಕಂಜ್ಯೂಮರ್ಸ್ ಸೊಸೈಟಿಯಲ್ಲಿ ಯಾವುದಾದರೂ ಒಂದು ಅಧಿಕಾರ ಸ್ಥಾನ ಹೊಂದಿದ್ದಾರೆಯೇ?

Sri RAMAKRISHNA HEGDE.—There is no loan given to the Central Marketing Society.

ಶ್ರೀ ಎಸ್. ಕರಿಯಪ್ಪ.—ಈ ಕಂಜ್ಯೂಮರ್ಸ್ ಕೋಆಪರೇಟೀವ್ ಸೊಸೈಟಿಯು ಒಂದು ಲಕ್ಷ ರೂಪಾಯಿ ತೆಗೆದುಕೊಂಡಿರುವುದಿಲ್ಲವೇ?

Sri KONDAJJI BASAPPA.—This Question is only with regard to the Milk Co-operative Society.

ಶ್ರೀ ಎಸ್. ಕರಿಯಪ್ಪ.—ಮಿಲ್ಕ್ ಪ್ರೊಡ್ಯೂಸರ್ಸ್ ಕೋ ಆಪರೇಟೀವ್ ಸೊಸೈಟಿಯು N E S ನಿಂದ 750 ರೂಪಾಯಿ ಖರ್ಚು ವೆಚ್ಚಕ್ಕಾಗಿ ತೆಗೆದುಕೊಂಡಿದೆಯಲ್ಲವೇ?

Sri KONDAJJI BASAPPA.—They have taken a loan from the N.E.S.

ಶ್ರೀ ಎಸ್. ಕರಿಯಪ್ಪ.—ಈ ಸೊಸೈಟಿಯಲ್ಲಿ ತಮ್ಮ ನೆಂಟರಿಷ್ಟರನ್ನು ಡೈರೆಕ್ಟರ್ ಎಂದು ಸೇರಿಸಿಕೊಂಡು ತಮ್ಮದೇ ಒಂದು ಸಂಸ್ಥೆ ಮಾಡಿಕೊಂಡು ಈ ಸೊಸೈಟಿಯನ್ನು ನಡೆಸುತ್ತಿದ್ದಾರೆ ಎಂಬುದು ನಿಜವಲ್ಲವೇ?

Sri KONDAJJI BASAPPA.—Government are not aware of it.

ಶ್ರೀ ಎಸ್. ಕರಿಯಪ್ಪ.—ಈ ಸೊಸೈಟಿಯ ಅಧ್ಯಕ್ಷರು ಶಾಲೆಯ ಮಕ್ಕಳಿಗೆ ಮಧ್ಯಾಹ್ನದ ಊಟ ಹಾಕುವ ವ್ಯವಸ್ಥೆ ಮಾಡುತ್ತೇವೆಂದು ಹೇಳಿ 15,000 ರೂಪಾಯಿ ವಸೂಲ್ಮಾಡಿ, N. E. S. ನಿಂದ ಹಣ ತೆಗೆದುಕೊಂಡು, ಪಾತ್ರೆ ಮುಂತಾದ ಸಾಮಾನು ಕೊಂಡದ್ದನ್ನು ತಮ್ಮ ಮನೆಗೆ ಸೇರಿಸಿಕೊಂಡು ಬಿಟ್ಟಿದ್ದಾರೆ. ಹಣ ಗಡಪ್ ಮಾಡಿದ್ದಾರೆ ಎಂಬುದು ನಿಜವೇ?

Mr. SPEAKER.—That does not arise.

ಶ್ರೀ ಕೆ. ಲಕ್ಕಪ್ಪ.—ಈ ಕೋಆಪರೇಟೀವ್ ಸೊಸೈಟಿಯ ಲೆಕ್ಕ ಪತ್ರಗಳನ್ನು ಯಾವಾಗ ಆಡಿಟ್ ಮಾಡಿದ್ದಾರೆ?

Sri KONDAJJI BASAPPA.—It has not started functioning at all

ಶ್ರೀ ಕೆ. ಲಕ್ಕಪ್ಪ.—ಅವರು ಹಣಬೇಕು ಎಂದು ಕೇಳಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

Sri KONDAJJI BASAPPA.—The Co-operative Department has not financed this society at all. They have got a loan from the N. E. S. that is all.

Sri SIDDAIAH KASHIMATH.—How many members are there in this Society ?

Sri KONDAJJI BASAPPA.—10.

ಶ್ರೀ ಆರ್. ಎನ್ ಲಕ್ಷ್ಮೀಪತಿ.—ಈ ಸೊಸೈಟಿ ರಿಜಿಸ್ಟರಾಗಿ ಎಷ್ಟು ದಿವಸವಾಗಿದೆ ?

Sri KONDAJJI BASAPPA.—It was registered on 24th January 1959.

Opening of evening Colleges in the State.

*Q.—649. Smt. RATNAMMA MADHAVA RAO (Shimoga):—

Will the Government be pleased to state:—

whether Evening Colleges would be opened in the State from this academic year and if so, when ?

A.—Sri S. R. KANTHI (Minister for Education).—

Evening Colleges could be started by Private Agencies with the permission of the University concerned. Three Colleges in the Karnataka University area intend to start Evening Colleges. The Mysore University has not yet taken a final decision regarding the advisability of Evening Colleges. Government have no proposals to start Evening Colleges.

ಶ್ರೀಮತಿ ರತ್ನಮ್ಮ ಮಾಧವರಾವ್.—ಮೈಸೂರು ವಿಶ್ವವಿದ್ಯಾನಿಲಯದವರು ಸಂಜೆ ಕಾಲೇಜು ಗಳಬಗ್ಗೆ ಅಂತಿಮ ತೀರ್ಮಾನ ಕೈಗೊಂಡಿಲ್ಲವೆಂದು ಹೇಳಿದ್ದೀರಿ. ಸರಕಾರದವರು ಏನಾದರೂ ತೀರ್ಮಾನವನ್ನು ತೆಗೆದುಕೊಂಡಿದ್ದಾರೆಯೇ ?

† ಶ್ರೀ ಎಸ್. ಆರ್. ಕಂಠಿ.—ಆ ತೀರ್ಮಾನವನ್ನು ಯೂನಿವರ್ಸಿಟಿಯವರು ತೆಗೆದುಕೊಳ್ಳುತ್ತಾರೆ. ಇವತ್ತು ಬೆಳಗ್ಗೆ ಪೇಪರಿನಲ್ಲಿ ಕೆಂಚಪ್ಪ ಕಮಿಟಿ ರಿಪೋರ್ಟ್ ಸಾರಾಂಶ ಈ ಬಗ್ಗೆ ಬಂದಿದೆ. ಮೈಸೂರು ಯೂನಿವರ್ಸಿಟಿಯೂ ಯೋಚನೆ ಮಾಡುತ್ತಾ ಇದೆ.

ಶ್ರೀಮತಿ ರತ್ನಮ್ಮ ಮಾಧವರಾವ್.—ಇದರಿಂದ ಕೆಲಸದಲ್ಲಿರುವವರಿಗೆ ಹೈಯರ್ ಸ್ಟಡೀಸಿಗೆ ಅವಕಾಶ ಸಿಕ್ಕುತ್ತದೆಂದು ಮೈಸ್ಕ್ ಬೆಂಗಾಲ್ ಮತ್ತು ಮಹಾರಾಷ್ಟ್ರದಲ್ಲಿ, ಸಂಜೆಕಾಲೇಜುಗಳನ್ನು ತೆರೆದಿದ್ದಾರೆ. ತಾವೂ ಆರೀತಿ ತೆರೆಯುವಬಗ್ಗೆ ಯೋಚನೆ ಮಾಡುತ್ತೀರ

ಶ್ರೀ ಎಸ್. ಆರ್. ಕಂಠಿ.—ನಮ್ಮ ಯೋಚನೆ ಅಲ್ಲ. ಅದಕ್ಕೆ ಯೂನಿವರ್ಸಿಟಿಯವರು ಪರ್ಮಿಷನ್ ಕೊಡಬೇಕಾಗುತ್ತದೆ. ಅದು ಯೂನಿವರ್ಸಿಟಿಗೆ ಸಂಬಂದಪಟ್ಟ ಪ್ರಶ್ನೆ. ಕರ್ನಾಟಕ ಯೂನಿವರ್ಸಿಟಿಯವರು ಈ ವರ್ಷ ಪರ್ಮಿಷನ್ ಕೊಟ್ಟಿದ್ದಾರೆ. ಮೂರು ಜನ ತೆರೆಯಲು ಅಲ್ಲಿ ಅಪ್ಲೈ ಮಾಡಿದ್ದರು, ಇಲ್ಲಿಯೂ ಅದೇಪ್ರಕಾರ ತೆರೆಯುತ್ತಾರೆ ಎಂದು ಕೇಳಿದ್ದೇನೆ.

Sri J. P. SARWESH.—In which districts are the three colleges mentioned by the Education Minister located ?

Sri S. R. KANTHI.—They are in Hubli and Dharwar.

Sri SIDDAIAH KASHIMATH.—Has the Karnatak University agreed to the opening of the three colleges ?

Sri S. R. KANTHI.—They have only stated that they have received the application.